ಶ್ರಿ ಎಂ. ಎರ್. ವಾಸುದೇವಮೂರ್ತಿ.—ಆಗ್ರೀವ್ಡ್ ಪಾರ್ಟಿಗೆ ಆ ಬಗ್ಗೆ ಏನಾದರೂ ಉತ್ತರ ಕೊಟ್ಟಿದ್ದೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಅದನ್ನು ಪರಿಶೀಲನೆ ಮಾಡಿ ಅದರ ಫಲತಾಂಶವನ್ನು ಅವರಿಗೆ ತಿಳಿಸುತ್ತೇವೆ.

ಶ್ರೀ ಎಂ. ಎರ್. ವಾಸುದೇವಮೂರ್ತಿ.—ತಾವು ತೀರ್ಮಾನ ತೆಗೆದುಕೊಂಡ ಮೇಲೆ ಪೆಂಡಿಂಗ್ ಕೇಸನ್ನಲ್ಲ ಫಾರ್ ಅಥವಾ ಎಗೆನಸ್ಟ್ ಎಂಬುದನ್ನು ತಿಳಿಸಬಹುದಲ್ಲಾ. ಅದನ್ನು ತಿಳಿಸಿದ್ದೀರಾ ಅಂತ ?

ಶ್ರೀ ಎಚ್. ಸಿ. ಬೋರಯ್ಯ.—ಪೆಂಡಿಂಗ್ ಇದ್ದರೆ ಅದನ್ನು ಗಮನಕ್ಕೆ ತಂದರೆ, ಇಲ್ಲಿಯ ವರೆಗೂ ಕ್ರಮ ತೆಗೆದುಕೊಳ್ಳದಿದ್ದರೆ, ಪರಿಶೀಲನೆ ಮಾಡಿ ಅದರ ಫಲತಾಂಶವನ್ನು ಅವರಿಗೆ ತಿಳಿಸುತ್ತೇವೆ.

ಶ್ರೀ ಜಿ. ವಿ. ಆಂಜನಪ್ಪ.—ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಬೆಲೆ ಬಾಳತಕ್ಕ ಸಾಮಾನು ಗಳು ಕಳೆದಿವೆ ಎಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ ?

ಶ್ರೀ ಎಚ್. ಸಿ. ಬೋರಯ್ಯ.—ಬಹಳ ವಿವರಗಳನ್ನು ಒದಗಿಸಬೇಕಾಗುತ್ತದೆ, ಪ್ರತ್ಯೇಕ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಜಿ. ವಿ. ಆಂಜನಪ್ಪ.—ಇನ್‌ಕ್ವೀಸ್ ಆಗಿಲ್ಲ ಎಂದು ಯಾವ ಆಧಾರದ ಮೇಲೆ ಹೇಳುತ್ತೀರಿ ? ವಿವರ ನಿಮ್ಮಲ್ಲಿ ಇಲ್ಲದೇ ಇದ್ದರೆ ಈ ವರ್ಷ ಇಷ್ಟು ಕಳೆದ ವರ್ಷ ಇಷ್ಟು ಅಂತ ಹೇಳಿ ನಿಮ್ಮ ಹತ್ತಿರ ವಿವರ ಇರಬೇಕು.

ಶ್ರೀ ಎಚ್. ಸಿ. ಬೋರಯ್ಯ.—ಆ ವಿವರ ಇಲ್ಲ.

ಶ್ರೀ ಎಂ. ಎರ್. ವಾಸುದೇವಮೂರ್ತಿ.—ಕೆಲವು ಸ್ಪೆಸಿಫಿಕ್ ಇನ್‌ಸ್ಟೆನ್ಸ್‌ನಲ್ಲಿ ಕ್ರಮ ಕೈಗೊಳ್ಳುವುದು ನಿಧಾನವಾಗಿದೆ ; ಆದ್ದರಿಂದ ಅವರಿಗೆ ಇನ್ನು ಮುಂದೆ ಹಾಗೆ ಮಾಡದಂತೆ ಸೂಕ್ತ ತಿಳುವಳಿಕೆಯನ್ನು ಕೊಡರಾಗುವುದೇ ?

ಶ್ರೀ ಎಚ್. ಸಿ. ಬೋರಯ್ಯ.—ಅಂಥ ನಿದರ್ಶನಗಳಿದ್ದರೆ ತಿಳಿಸಿ. ಅದನ್ನು ವಿಚಾರ ಮಾಡುವುದಕ್ಕೆ ಹೇಳುತ್ತೇನೆ.

ಶ್ರೀ ಎಂ. ಎರ್. ವಾಸುದೇವಮೂರ್ತಿ.—ಬಸ್ಸಿನೊಳಗಡೆ ಅಂಥ ಬೆಲೆಯಾದ ವಸ್ತುಗಳನ್ನು ಇಟ್ಟುಕೊಳ್ಳುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎಚ್. ಸಿ. ಬೋರಯ್ಯ.—ಪ್ರಯಾಣಿಕರ ಸಾಮಾನುಗಳನ್ನು ರಕ್ಷಣೆ ಮಾಡುವುದಕ್ಕಾಗಿ ಸರ್ಕಾರ ಟಾರ್ಪಾಲ್ ಮತ್ತು ಹಗ್ಗ ಇತ್ಯಾದಿಗಳನ್ನೆಲ್ಲಾ ಒದಗಿಸಿದೆ. ಹಾಗೂ ಬಸ್ಸಿನೊಳಗಡೆ ಸಾಮಾನುಗಳನ್ನು ಇಡುವುದಕ್ಕೂ ಕೂಡ ಅವಕಾಶ ಇದೆ.

ಶ್ರೀ ಎಂ. ಎರ್. ವಾಸುದೇವಮೂರ್ತಿ.—ಹಾಗೆ ತಾವು ಒಳಗಡೆ ಒಂದು ಸುರಕ್ಷಿತವಾದ ಸ್ಥಳವನ್ನು ಮಾಡಿಕೊಟ್ಟರೆ ಅದಕ್ಕೆ ಪ್ರತ್ಯೇಕ ಚಾರ್ಜನ್ನು ಕೊಡುವುದಕ್ಕೂ ಕೂಡ ಪ್ರಯಾಣಿಕರು ಸಿದ್ಧವಾಗಿದ್ದಾರೆ. ಅದನ್ನು ಮಾತಲು ವ್ಯವಸ್ಥೆಮಾಡುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಇದನ್ನು ಪರಿಶೀಲನೆ ಮಾಡರಾಗುತ್ತದೆ.

Deputation of Secretariat Officials to Bangalore University

51. Sri G. V. ANJANAPPA.—(Graduates' Constituency).—

Will the Minister for Education be pleased to state.—

(*a*) the number of Secretariat officials deputed to the Bangalore University ;

(*b*) when they were deputed and the period of deputation ;

(*c*) whether they are there beyond their term ;

(*d*) if so, the reason for not calling them back to their original place ;

(*e*) the compelling reasons for their over-stay ?

Sri N. M. KOTRABASAIAH SOGI (Deputy Minister for Education).—

(*a*) Six.

(*b*) *Sriyuths*	*Desigaation*	*Period of deputation*
1. S. S. Patil ...	Section Officer	... 8-10-1964 to 15-7-1970
2. G. Nanjappa ...	do	... 29-7-1964 to 31-7-1969
3. S. S. Kulkarni ...	Sr. Assistant	... 21-7-1964 to 15-7-1970
4. S. R. Nayak ...	do	... 29-7-1964 to 31-7-1969
5. P. N. Rama Iyengar	Stenographer	... 1-8-1964 to 15-7-1970
6. K. S. Venkatachalam	Typist (now-Jr. Assistant)	... 10-7-1964 to 20-7-1968

(*c*) No.

(*d*) Does not arise.

(*e*) Does not arise.

ಶ್ರೀ ಜಿ. ವಿ. ಆಂಜನಪ್ಪ.—ವಿಶ್ವವಿದ್ಯಾನಿಲಯಕ್ಕೆ ಎರವರಾಗಿ ಕೊಟ್ಟಿದ್ದ ಜನರನ್ನು ಎಷ್ಟು ಅವಧಿಯತನಕ ಎಂದು ಮೊದಲು ನಿಗದಿ ಮಾಡಲಾಗಿತ್ತು ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮೊದಲು ಮೂರು ವರ್ಷಗಳಿಗೆಂದು ನಿಗದಿ ಮಾಡಲಾಗಿತ್ತು. ಈಗಾಗಲೇ ಯಾರ ಅವಧಿ ಪೂರೈಸಿದೆಯೋ ಅಂಥವರಲ್ಲಿ ಕೆಲವರು ವಾಪಸ್ ಬಂದಿದ್ದಾರೆ.

ಶ್ರೀ ಜಿ. ವಿ. ಆಂಜನಪ್ಪ.—ಇಲ್ಲಿ ಕೆಲವರ ಚರ್ಮನ್ನು ಮುಂದುವರಿಸಲಾಗಿದೆ ಎಂದು ಹೇಳಿರು ವುದರ ಬಗ್ಗೆ ಇದ್ದ ಅಂಥ ಪ್ರಬಲವಾದ ಕಾರಣಗಳೇನು ?

†Indicates that the remarks or speeches have not been revised by the member concerned.

Sri N. M. KOTRABASAIAH SOGI.—Most of them have been repatriated to Government after their deputation period. I think the term of two or three Officers has been extended up to 15th July 1970 as per the request of the University.

ಶ್ರೀ ಜಿ. ವಿ. ಆಂಜನಪ್ಪ.—ಹಾಗೆ ಅವರ ಸೇವೆಯನ್ನು ಮುಂದುವರಿಸಬೇಕೆಂದು ವಿಶ್ವವಿದ್ಯಾನಿಲಯದವರು ಕೇಳಿಕೊಂಡಿದ್ದರೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಹೌದು.

ಶ್ರೀ ಜಿ. ವಿ. ಆಂಜನಪ್ಪ:—ಯಾವ ಆಧಾರದಮೇಲೆ ಅವರು ಆ ಮನವಿಗಳನ್ನು ಮಾಡಿಕೊಂಡಿದ್ದರು ಎಂಬುದಕ್ಕೆ ವಿವರಗಳನ್ನು ನಥೆಯ ಮುಂದೆ ಮಂಡಿಸುವರೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಆ ವಿವರಗಳಿಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದಾಗುತ್ತದೆ.

ಶ್ರೀ ಎನ್. ಪಿ. ರಾಜಣ್ಣ.—ಟರ್ಮ್ ಮುಗಿದಿರತಕ್ಕ ಮೂರು ಜನ ಅಧಿಕಾರಿಗಳನ್ನು ವಾಪಸ್ ಕರೆಸಿಕೊಳ್ಳುವುದಕ್ಕೇನು ತೊಂದರೆ ಇದೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂಥವರನ್ನಾಗಲೇ ವಾಪಸ್ ಕರೆಸಿಕೊಂಡಿದ್ದೇವೆ.

Sri G. V. GOWDA.—If these posts are necessary, why did not the Government advise the University when they wanted their extension to sanction those posts and recruit people according to rules?

Sri N. M. KOTRABASAIAH SOGI.—When the University was newly started; they got the officials from various sources *viz.*, from Government, other Universities and other offices. These are the officials who were deputed in the beginning. Now, they have been recruiting their own personnel.

ಶ್ರೀ ಜಿ. ವಿ. ಆಂಜನಪ್ಪ.—ವಿಶ್ವವಿದ್ಯಾನಿಲಯದವರಿಗೆ ಎರವಲು ತೆಗೆದುಕೊಳ್ಳತಕ್ಕ ಪದ್ಧತಿ ಮೊದಲು ಪ್ರಾರಂಭದಲ್ಲಿ 5 ವರ್ಷಗಳಿಗೆಂದು ಪ್ರಾರಂಭವಾದದ್ದು ಇದೀಗ 50 ವರ್ಷಗಳಾದರೂ ಮುಗಿಯುವುದಿಲ್ಲ ಅಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮೊದಲು ಮೂರುವರ್ಷಗಳಿಗೆಂದು ಕೇಳಿದ್ದರು. ಅನಂತರ ಒಬ್ಬಬ್ಬರನ್ನು ಮತ್ತೆ ಅವರ ಸೇವೆಯನ್ನು ಮುಂದುವರಿಸುವಂತೆ ವಿಶ್ವವಿದ್ಯಾನಿಲಯದವರು ಪ್ರಾರ್ಥಿಸಿದ್ದರಿಂದ ಅವರ ಸೇವೆಯನ್ನು ಮುಂದುವರಿಸಲಾಯಿತು. ಇದರಲ್ಲಿ 50 ವರ್ಷದ ಪ್ರಶ್ನೆಯೇ ಇಲ್ಲ.

ಶ್ರೀ ಜಿ. ವಿ. ಆಂಜನಪ್ಪ.—ದಕ್ಷರಾದ ಅಧಿಕಾರಿಗಳನ್ನು ಹೀಗೆ ಎರವಲು ಕೊಟ್ಟರೆ ಇಲ್ಲಿನ ಕೆಲಸಕ್ಕೆ ಅಡಚಣೆ ಆಗುವುದಿಲ್ಲವೇ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದೂ ಕೂಡ ಬೆಳೆಯಬೇಕಾದಂಥ ಒಂದು ಸಂಸ್ಥೆ. ಅಲ್ಲಿಯೂ ಕೂಡ ದಕ್ಷರ ಅಗತ್ಯ ಅವಶ್ಯಕವಾಗಿತ್ತು. ಅದಕ್ಕಾಗಿ ಅವರ ಸೇವೆಯನ್ನು ಅವರು ಬೇಡಿದ್ದರು.

ಶ್ರೀ ಎನ್. ಪಿ. ರಾಜಣ್ಣ.—ಈಗ ಮೂವರನ್ನು ವಾಪಸ್ಸು ತೆಗೆದುಕೊಂಡಿದ್ದೀರಿ. ಅವರ ಡೆಪ್ಯುಟೇಷನ್ ಅವಧಿ ಎಷ್ಟು ? ಮುಂದೆ ಅವರನ್ನು ಎಕ್ಸ್‌ಟೆಂಡ್ ಮಾಡುವ ವಿಷಯ ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರ ಟರ್ಮನ್ನು ಎಕ್ಸ್‌ಟೆಂಡ್ ಮಾಡಿಲ್ಲ. ಕೆಲವರು ಇನ್ನೂ ಲೀವ್‌ನಲ್ಲಿದ್ದಾರೆ.